ಕಾಲಿಂಗ್‌ಬೆಲ್ ಹಕ್ಕಿಯ ದನಿಯಲ್ಲಿ ಉಲಿಯಿತು. ಸೋಫಾದ ದಿಂಬಿಗೊರಗಿ ಎದುರಿನ ಟೀವಿ ಪರದೆಯ ಮೇಲಿನ ದೃಶ್ಯವನ್ನು ನೋಡಿಯೂ ನೋಡದಂತೆ ಉದಾಸಭಾವದಲ್ಲಿ ವೀಕ್ಷಿಸುತ್ತಿದ್ದ ರಂಗನಾಥರಾಯರು ತಟ್ಟನೆ ಕೂತ ಭಂಗಿ ಬದಲಿಸಿ ನೆಟ್ಟಗೆ ಕೂತರು. ಇರಸರಿಕೆಯಲ್ಲಿನ ಜಡತ್ವ ಕಳೆದು ಉತ್ಸಾಹ ಆವಾಹನೆಯಾದಂತೆ ಕಣ್ಣುಗಳಲ್ಲಿ ಹೊಳಪು.

"ಎಲ್ಲಿದೀಯೇ ಮಗು? ಬಾಗಿಲು ತೆಗೀತೀಯಾ? ಫಲ್ಗುಣ ಬಂದಾಂತ ಕಾಣುತ್ತೆ..."

ವೈಷ್ಣವಿಯನ್ನು ರಾಯರು ಕರೆಯಬೇಕಾದ್ದೇನಿರಲಿಲ್ಲ. ಅದಾಗಲೇ ಅವಳು ಒಂದೇ ಹಾರಿಗೆ ಮುಂಬಾಗಿಲ ಬಳಿ ಓಡಿ ಬಾಗಿಲು ತೆಗೆದಾಗಿತ್ತು. ಎದುರಿನ ಮೆಟ್ಟಿಲಿನ ಮೇಲೆ ನಿಂತಿದ್ದ ಫಲ್ಗುಣ "ಹಾಯ್..." ಎನ್ನುತ್ತಾ ಒಳಗೆ ಕಾಲಿಟ್ಟ. ಅವನೊಡನೆ ಯಾವತ್ತಿನಂತೆ ಕರ್ಪೂರದ ಮಂದ ಸುಗಂಧದ ನವಿರು ಪರಿಮಳ ನಾಸಿಕಾಗ್ರವನ್ನು ಅರಳಿಸಿ, ಮನಸ್ಸನ್ನು ಮುದಗೊಳಿಸುವಂತೆ ಒಳಗೆ ಪ್ರವೇಶಿಸಿತು. ವೈಷ್ಣವಿ ದೀರ್ಘವಾಗಿ ಉಸಿರೆಳೆದುಕೊಂಡು ವಾತಾವರಣದ ಬದಲಾವಣೆಯನ್ನು ಆಘ್ರಾಣಿಸಿ ಸುಖಿಸಿದ್ದನ್ನು ಕಂಡರೂ ಕಾಣದಂತೆ ಫಲ್ಗುಣ ಕಾಲಿನ ಶೂಸುಗಳನ್ನು ಕಳಚಿ ಮೂಲೆಯಲ್ಲಿಟ್ಟ.

"ಪರವಾಗಿಲ್ಲ, ನಡುಮನೆಯವರೆಗೆ ಬರೋಕೆ ಅವಕ್ಕೆ ಪರವಾನಿಗೆ ಇದೆ" ಕೀಟಲೆ ಮಾತಾಡಿದಳು ವೈಷ್ಣವಿ. ಸಾಕ್ಸು ಕಳಚಿ ಶೂಸಿನೊಳಗೆ ತುರುಕಿದ ಫಲ್ಗುಣ ಸಹಜವಾಗೆಂಬಂತೆ ಉತ್ತರಿಸಿದ,

"ಯಾವುದು ಎಲ್ಲಿರ್ಬೇಕೋ ಅಲ್ಲಿದ್ದರೇ ಚಂದ."

"ದಿನಾ ಹೊರಗಡೆ ಶೂಸು ಕಳಚಿ ಬರ್ತಿದ್ರಿ, ಇವತ್ತೇನಪ್ಪಾ ಹೊಸ ಪರಿ?" ರಾಗವಾಗಿ ಕೇಳಿದಳು ವೈಷ್ಣವಿ.

"ಹೊರಗಡೆ ನೋಡಿದೀರಾ ನೀವು? ಮನೆ ಒಳಗೆ ಬೆಚ್ಚಗೆ ಕೂತಿದ್ರೆ ಹೊರಗಿನ ಪ್ರಪಂಚದ ಅನುಭವ ದಕ್ಕೋದಿಲ್ರೀ. ಬಾಗಿಲು ತೆಗೆದು ಹೊರಗೆ ನೋಡೋದನ್ನು ಅಭ್ಯಾಸ ಮಾಡ್ಕೋಬೇಕು ನೀವು..."

"ಬೆಚ್ಚಗೆ ಇದ್ದಿದ್ದು ಅಭ್ಯಾಸವಾಗ್ಬಿಟ್ಟಿದೆ, ಏನ್ಮಾಡ್ತೀರಿ?" ಹೀಗೆನ್ನುತ್ತಾ ತೆರೆದ ಬಾಗಿಲಿನ ಆಚೆ ಕಣ್ಣು ಹಾಯಿಸಿದಳು ವೈಷ್ಣವಿ. ಮೋಡ ಮುಸುಕಿದ ವಾತಾವರಣ. ತಣ್ಣಗೆ ಮೈ ಸೋಕಿ ಚಳಿಗುಳ್ಳೆ ಹುಟ್ಟಿಸುವ ಕುಳಿರು ಗಾಳಿ. ಸಂಜೆಯ ಆರು ಗಂಟೆಗೆಲ್ಲಾ ಕತ್ತಲು ಕವಿದಂತೆ ಮಬ್ಬು ಮಬ್ಬು.

"ಮಳೆ ಬರುತ್ತೇಂತ ಕಾಣುತ್ತೆ..." ಬಾಗಿಲು ಮುಚ್ಚಿದಳು ವೈಷ್ಣವಿ.

"ಅದಕ್ಕೇ ಮತ್ತೆ, ಶೂಸು ಕಳಚಿ ಒಳಗಿಟ್ಟಿದ್ದು..."

"ತುಂಬಾ ಮುಂದಾಲೋಚನೆಯವರಪ್ಪಾ. ನಿಮ್ಮ ವಸ್ತು ಅಂದ್ರೆ ಭಾರೀ ಜಾಗ್ರತೆ..."

"ನನ್ನ ಸ್ವಭಾವಾನೇ ಅಂತಾದ್ದು ಕಣ್ರೀ. ನನಗೆ ಸೇರಿದ ವಸ್ತು ಅಂದ್ರೆ ಮುನ್ನೆಚ್ಚರಿಕೆ ಜಾಸ್ತಿ.